# ಜೈ ಗುರುದೇವ

## ಅಧ್ಯಾಯ ೧ – ಗುರುದೇವನ ಜನನ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ಚಂದ್ರಮಣಿ ದೇವಿ

೨೧. ಖುದಿರಾಮ ಭೂಸುರನ ಸತಿಚಂದ್ರಮಣಿಯು ।
ದಯೆಯ ಪ್ರತಿರೂಪ ಸದಮಲೆ ಸದ್ಗೃಹಿಣಿಯು ॥

೨೨. ಹಸಿದುಬಂದವರಿಗನ್ನವನೀವ ಸುಗುಣೆ ।
ಅನವರತ ಅತಿಥಿಗಳನಾದರಿಪ ಜಾಣೆ ॥

೨೩. ವಂಚನೆಯ ಲವಲೇಶವಿಲ್ಲವಳ ಮನದಿ ।
ಸಂಚುಹೊಂಚುಗಳ ಬಗೆ ಅರಿಯದಾ ಮುಗುದೆ ॥

೨೪. ಪರರ ಹಿತಕಾಗಿ ತನ್ನ ಶ್ರಮ ಮರೆತು ।
ನಿರತ ದುಡಿವಳು ಸೇವಾಭಾವಬೆರೆತು ॥

೨೫. ತಾಮಸಕೆ ಎಡೆಗೊಡದ ಪುಣ್ಯಾತ್ಮೆಯವಳು ।
ಅವತಾರಪುರುಷನನು ಜಗಕೆ ನೀಡಿದಳು ॥

೨೬. ನಮ್ಮಜ್ಜಿಯವಳೆಂದು ನನಗಿಹುದು ಹೆಮ್ಮೆ ।
ಅವಳ ಕಾಣುವ ಯೋಗವೆನಗಿಲ್ಲವೆಂಬೆ ॥

೨೭. ಅಜ್ಜಿಯಾ ಪದಕೆ ಸಾವಿರ ನಮನಗೈವೆ ।
ಅವಳ ಕಾಣುವ ಯೋಗವೆನಗಿಲ್ಲವೆಂಬೆ ॥

೨೮. ದುರ್ಭಾಗ್ಯ ನಾನವಳ ಪದಧೂಳಿ ಬೇಡಿ ।
ದಿವ್ಯಭಾವದೊಳೆನ್ನ ಹರಸೆಂಬೆ ಪಾಡಿ ॥

### ಗುರುದೇವನ ಕುಟುಂಬ

೨೯. ಮೂವರು ಸುಪುತ್ರರನು ಪಡೆದಳಾ ತಾಯಿ ।
ಹಿರಿಯ ರಾಮಕುಮಾರನೆನಿಸಿದ ಸುಧ್ಯೈವಿ ॥

೩೦. ಎರಡನೆಯ ಮಗನು ರಾಮೇಶ್ವರನು ಎಂದು ।
ಗುರುದೇವ ಕೊನೆಯ ಮಗನವ ವಿಶ್ವಬಂಧು ॥

೩೧. ಈರ್ವರೇ ಕುವರಿಯರೊಳಾ ಕಾತ್ಯಾಯಿನಿಯು ।
ಹಿರಿಯವಳು ಸ್ವರ್ಣಮಂಗಳೆ ಕಿರಿಯ ಮಗಳು ॥

೩೨. ರಾಮಕುವರನಿಗೊಬ್ಬ ಮಗನು ಪುಟ್ಟಿರ್ದ ।
ಹೆಸರು ಅಕ್ಷಯ ಬಾಲ್ಯದೊಳೆ ಮೃತಿಯ ತಳೆದ ॥

೩೩. ರಾಮೇಶ್ವರಗೆ ರಾಮಲಾಲ ಶಿವರಾಮ ।
ನಾಮಾಂಕಿತರು ಸುತರು ತಾಳಿದರು ಕ್ಷೇಮ ॥

೩೪. ಲಕ್ಷ್ಮಿಯೆಂಬೊಬ್ಬಳೇ ಮಗಳನ್ನು ಪಡೆದ ।
ಇಷ್ಟೇ ಗುರುದೇವನೊಡ ಹುಟ್ಟುಸಂಬಂಧ ॥

೩೫. ನನಗೆ ನೆನಪಾದ ಆ ಬಂಧುಗಳ ಪದಕೆ ।
ತಲೆಬಾಗಿ ವಂದಿಸುತ ಪಡೆವೆ ಶುಭಹರಕೆ ॥

೩೬. ಹಿಂದೆಂದು ಕೇಳರಿಯದಿರುವಂಥ ಘಟನೆ ।
ಗುರುದೇವನವತಾರ ಕಾಲದಾ ನಟನೆ ॥

೩೭. ಆಸಕ್ತಿಯಲಿ ಪೇಳ್ವೆ ನಾ ಕಥೆಯನೊಲಿದು ।
ಹಲವು ರೀತಿಯೊಳದನು ಕೀರ್ತಿಪರು ಜನರು॥

### ಅಲೌಕಿಕ ಘಟನೆ

೩೮. ಖುದಿರಾಮ ಪೋದನು ಗಯಾಯಾತ್ರೆಗೆಂದು ।
ಅಲ್ಲಾದುದವನಿಗಾಶ್ಚರ್ಯದನುಭವವು ॥

೩೯. ದಣಿದು ಮಲಗಿರೆ ರಾತ್ರಿಯೊಳು ಕನಸ ಕಂಡ ।
ಮೇಘವರ್ಣದ ದಿವ್ಯ ಆಕೃತಿಯು ಚಂದ ॥

೪೦. ಶಂಖ ಚಕ್ರಾಂಕಿತ ಗದಾಪದ್ಮಧಾರಿ ।
ಕರಚತುಷ್ಟಯ ತೋರಿ ಮುಗುಳು ನಗೆಬೀರಿ॥

೪೧. ಮಂದಹಾಸವ ತೋರಿ ಮೃದು ಸ್ವರದೊಳೆಂದ ।
ನಿನ್ನಾಸರೆಯ ಮನೆಯ ಮಗುವಪ್ಪೆನೆಂದ ॥

೪೨. ಆ ನುಡಿಯ ಕೇಳಿ ಸದ್ಬ್ರಾಹ್ಮಣನು ಪೇಳ್ದ ।
ನಿನ್ನೊಲವಿಗೆಣೆಯುಂಟೆ ಓ ದೇವ ದೇವ ॥

೪೩. ಉಡಲುಣಲು ಗತಿಯಿಲ್ಲವೆನಗೆ ಬಾಳಿನಲಿ ।
ಪಡೆದು ನಿನ್ನನು ಸಲಹಲೆಂತು ಈ ಜಗದಿ ॥

೪೪. ದಿವ್ಯಾಕೃತಿಯೊಳುತ್ತರವನಿತ್ತೆ ಚಿನ್ಮಯನು ।
ಎನ್ನ ಸಲಹುವ ಬಗೆಗೆ ಚಿಂತಿಸುವೆಯೇನು ॥

೪೫. ಅನುಮಾನವನುಪಡದೆ ಹೊಣೆಯಹೊರು ನೀನು।
ಬೆಳೆಯುವೆನು ನನ್ನಿಷ್ಟದಂದದಲಿ ನಾನು ॥

೪೬. ಧೈರ್ಯವನು ಹೇಳುತಾ ಮೂರ್ತಿಮರೆಯಾಗೆ ।
ನಿದ್ದೆಯನು ತಿಳಿದೆದ್ದು ಕುಳಿತು ಸಮನಾಗಿ ॥

೪೭. ಈ ಜಾವದಲಿ ಕಂಡ ಕನಸು ನಿಜವಹುದು ।
ಭವಿತವ್ಯ ಸೂಚನೆಯು ಭವ್ಯವಾಗಿಹುದು ॥